ಹೆಚ್ಚಾಗಿ ನನ್ನನ್ನು ಪ್ರೀತಿಸುತ್ತಾರೆ' 'ಹಾಗಿದ್ದರೆ ಒಂದು ಕೆಲಸ ಮಾಡು. 'ನೀವು ಹೇಳಿದಂತೆಯೇ ಮದುವೆಯಾಗಿ ನೀವು ಆತ್ಮಹತ್ಯೆ ಮಾಡಿಕೊಳ್ಳುವುದನ್ನು ತಪ್ಪಿಸುತ್ತೇನೆ. 'ಆದರೆ, ಅಂತಹ ಮದುವೆಯನ್ನು ನನಗೆ ಎದುರಿಸುವುದು ಕಷ್ಟವಾದ್ದರಿಂದ ಮದುವೆಯಾದ ಮರುದಿನವೇ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ' ಎಂದು ಹೇಳು. ಅವರು ಹೇಗೆ ಪ್ರತಿಕ್ರಿಯಿಸುತ್ತಾರೋ ನೋಡೋಣ' ಎಂದು ಸಲಹೆ ಮಾಡಿದೆ.

ಅವನು ನನ್ನ ಸಲಹೆಯನ್ನು ಅನುಸರಿಸಿದ. ತಂದೆ-ತಾಯಿಗಳು ಕಂಗಾಲಾಗಿ 'ಹುಟ್ಟಿಸಿ ಬೆಳೆಸಿದವರಿಗೆ ಹಿಂಗೆಲ್ಲಾ ಮಾತಾಡ್ತಿಯಲ್ಲೋ...' ಎಂದು ಸ್ವಲ್ಪ ಎಗರಾಡಿ, ಅನಂತರ ತೆಪ್ಪಗಾಗಿದ್ದಾರೆ. ಈಗ ಆತ್ಮಹತ್ಯೆಯ ಆಯುಧವನ್ನು ಅವನ ಮೇಲೆ ಬಳಸುವುದನ್ನು ನಿಲ್ಲಿಸಿದ್ದಾರೆ. ನಿಸ್ವಾರ್ಥ ಪ್ರೀತಿಯಿದ್ದಲ್ಲಿ ನಮ್ಮ ದೇಹವನ್ನು ದಂಡಿಸಿ ಮತ್ತೊಬ್ಬರಿಗೆ ನೋವನ್ನು ನೀಡುವುದು ಅಂತಹ ಸುಲಭದ ಸಂಗತಿಯಲ್ಲ. ಆದರೆ ನನಗೆ ಮತ್ತೊಂದು ಚಿಂತೆ ಕಾಡುತ್ತದೆ. ಈ ಪ್ರಸಂಗದಲ್ಲಿಯೇನೋ ಅವನ ತಂದೆ-ತಾಯಿಗಳು ತೆಪ್ಪಗಾದರು. ಆದರೆ, ಕೆಲವರು ಮಗನು ಮದುವೆಯಾದ ಮೇಲೆ 'ಮಾಮೂಲಿ ಗಂಡುಹುಡುಗ'ನಂತೆ ಸರಿ ಹೋಗುತ್ತಾನೆ ಎನ್ನುವ ಭಂಡ ನಂಬಿಕೆಯಲ್ಲಿ 'ಅಡ್ಡಿಯಿಲ್ಲ. ನೀನು ಮೊದಲು ಮದುವೆಯಾಗು. ಮುಂದಿನದನ್ನು ಆಮೇಲೆ ನೋಡಿಕೊಳ್ಳೋಣ' ಎಂದು ಹೇಳಿಬಿಟ್ಟರೆ ಗತಿಯೇನು!

ಈ ದೇಹ ದಂಡಿಸುವ ಕ್ರಮ ವ್ಯಕ್ತಿ-ವ್ಯಕ್ತಿಗಳ ಸಂಬಂಧಗಳಲ್ಲಿ ಮಾತ್ರ ಜರುಗುವುದಿಲ್ಲ. ಯಾವುದೇ ಶೋಷಿತ-ಶೋಷಕ ವರ್ಗಗಳ ಮಧ್ಯದಲ್ಲಿಯೂ ನಡೆಯುವ ಸಾಧ್ಯತೆಯಿದೆ. ಒಂದು ರೀತಿಯಲ್ಲಿ ಉಪವಾಸ ಸತ್ಯಾಗ್ರಹ ಇದೇ ಮಾದರಿಯ ಪ್ರತಿಭಟನೆಯೇ ಆಗಿದೆ. ಸ್ವಾತಂತ್ರ್ಯ ಸಂಗ್ರಾಮದ ಹೊತ್ತಿನಲ್ಲಿ ಗಾಂಧೀಜಿ ಉಪವಾಸ ಸತ್ಯಾಗ್ರಹ ಕ್ರಮವನ್ನು ಬಹುವಾಗಿ ಪ್ರಯೋಗಿಸಿದರು. ಸ್ವಾತಂತ್ರ್ಯ ದೊರೆತ ನಂತರವೂ ಈ ಕ್ರಮ ಬಳಕೆಯಲ್ಲಿಯೇ ಇದೆಯಾದರೂ ತನ್ನ ಜನಪ್ರಿಯತೆಯನ್ನು ಕಳೆದುಕೊಂಡಿದೆ. ಇಲ್ಲಿ ಮುಖ್ಯವಾಗಿ ನಮ್ಮ ದೇಹವನ್ನು ದಂಡಿಸಿ, ಶೋಷಕರನ್ನು ಪಾಪಪ್ರಜ್ಞೆಗೆ ದೂಡುವುದಕ್ಕಿಂತಲೂ ಹೆಚ್ಚಾಗಿ ಅವರನ್ನು ಹೆದರಿಸುವ

